

ಪ್ರಸಿದ್ಧ ದೋಣಿಯಾಕಾರದ ಕಾರಂಜಿ,'ಸ್ಪ್ಯಾನಿಷ್ ಸ್ಟೆಪ್ಸ್'

# ರೋಮ್‌ನಲ್ಲಿ ಕೀಟ್ಸ್ ಕೊನೆಯ ಹಾಡು

■ ಸುಚಿತ್ರಾ ಹೆಗಡೆ

ರೋಮ್‌ನಲ್ಲಿ ಓಡಾಡುವಾಗ ಹಾದಿಗೊಂದು ಬೀದಿಗೊಂದು ಸಿಗುವ ಸುಂದರ ಕಾರಂಜಿಗಳು ಇದನ್ನು ರೊಮ್ಯಾಂಟಿಕ್ ನಗರವನ್ನಾಗಿಸಲು ಪಣ ತೊಟ್ಟಂತೆ ಕಾಣುತ್ತಿದ್ದವು. ಇವುಗಳಲ್ಲಿ ಟ್ರೆವಿ ಫೌಂಟೇನ್ ಎಲ್ಲಕ್ಕಿಂತ ಪ್ರಸಿದ್ಧ ಮತ್ತು ಮನಮೋಹಕ. ಪಿಯಾಜಾ ಡಿ ಸ್ಪಾಗ್ನಾದಲ್ಲಿರುವ ಬಾರ್ಕಾಚಾ ಕಾರಂಜಿಯ ಗಮ್ಮತ್ತೇ ಬೇರೆ. ಇದರ ಆಸುಪಾಸಿನಲ್ಲಿ ಬಿಡುವಿಲ್ಲದ ಪ್ರವಾಸಿಗರ ದಂಡಿನ ನಡುವೆಯೂ ಒಂದು ವಿಲಕ್ಷಣವಾದ ಶಾಂತಿಯ ಅನುಭವವಾಗುತ್ತದೆ. ಇಟಲಿಯ ಪ್ರಸಿದ್ಧ ಕಲಾಕಾರ ಬರ್ನಿನಿ 1629ರಲ್ಲಿ ಟೈಬರ್ ನದಿಯ ಮಹಾಪ್ರವಾಹದ ಸಂಕೇತವಾಗಿ ನಿರ್ಮಿಸಿದ ದೋಣಿಯಾಕಾರದ ಕಾರಂಜಿ, 'ಸ್ಪ್ಯಾನಿಷ್ ಸ್ಟೆಪ್ಸ್' ಎಂದೇ ಚಿರಪರಿಚಿತವಾಗಿರುವ ಐತಿಹಾಸಿಕ ಮೆಟ್ಟಿಲುಗಳಡಿಯಲ್ಲಿ ತಣ್ಣಗಿನ ನಗುಬೀರುತ್ತದೆ.

ಪ್ರವಾಸಿಗರಿಂದ ಗಿಜಿಗುಡುವ, ಸಾಲಾಗಿ ಕುದುರೆ ಸಾರೋಟುಗಳು ನಿಂತಿರುವ ಈ ವೃತ್ತದ ಸುತ್ತಲೂ ನೋಡಿದರೆ ಮಧ್ಯಯುಗದ ಯೂರೋಪು ಖಂಡವೇ ಇಲ್ಲಿ ಸಮ್ಮಿಳಿತವಾಗಿರುವಂತೆ ತೋರುತ್ತದೆ. ಇಟಲಿಯ ಕಾರಂಜಿ, ಸ್ಪೇನಿನ ಮೆಟ್ಟಿಲುಗಳು, ಪಕ್ಕದಲ್ಲಿ ಇಂಗ್ಲೆಂಡಿನ ಮಹಾಕವಿಗಳಾದ ಕೀಟ್ಸ್, ಶೆಲ್ಲಿ ಮ್ಯೂಸಿಯಮ್ಮು!

ಕೀಟ್ಸ್, ಶೆಲ್ಲಿ ಮತ್ತು ಬೈರನ್‌ರಂತಹ ಮಹಾ ರೊಮ್ಯಾಂಟಿಕ್ ಕವಿಗಳು ಸಹಜವಾಗಿಯೇ ರೋಮನ್ನು ಪ್ರೀತಿಸಿದ್ದರು. ಇಲ್ಲಿಯೇ ಕೆಲ ಕಾಲ ನೆಲೆಸಿದ್ದರು. ಕೀಟ್ಸ್ ಮಾತ್ರ ಕೊನೆಯುಸಿರೆಳೆದದ್ದೂ ಇಲ್ಲಿಯೇ. ರೋಮ್ ರೋಮಾಂಚಕವೆನಿಸಲು ಈ ಕವಿಗಳನ್ನು ಎಡೆಬಿಡದೇ ಓದಿದ್ದು ಒಂದು ಕಾರಣವಾದರೆ, ಇನ್ನೊಂದು ಹಾಲಿವುಡ್‌ನ ರೊಮ್ಯಾನ್ಸಿಗೊಂದು ಭಾಷ್ಯ ಬರೆದಂತಿರುವ 'ದ ರೋಮನ್ ಹಾಲಿಡೇ' ಸಿನಿಮಾ. ಗ್ರೆಗರಿ ಪೆಕ್ ಮತ್ತು ಆಡ್ರೆ ಹ್ಯಾಪ್ಬರ್ನ್ ಜೋಡಿಯ ಪ್ರಣಯ ಸಲ್ಲಾಪ ರೋಮಿನ ಗಲ್ಲಿ ಗಲ್ಲಿಗಳನ್ನು ಬೆಚ್ಚಗಾಗಿಸಿತ್ತು. ರೊಮ್ಯಾನ್ಸಿನೊಂದಿಗೆ ಯೂರೋಪಿನಲ್ಲಿ ಸುಲಭಕ್ಕೆ ಲಭ್ಯವಾಗದ ಬೆಚ್ಚಗಿನ ಬಿಸಿಲು ಇಟಲಿಯ ಹವಾಮಾನವನ್ನು ಪರಿಪೂರ್ಣವಾಗಿಸಿತ್ತು.

'ಅಮರ ನಗರ'ವೆಂದೇ ಹೆಸರಾದ ರೋಮಿನ ಮೋಹಕ್ಕೆ ತುತ್ತಾಗಿದ್ದ ಕವಿಗಳ ದಂಡಿಗೆ ಕೀಟ್ಸ್ ಮಹಾಕವಿ ಕೂಡ ಹೊರತಾಗಿರಲಿಲ್ಲ. ಇಂಗ್ಲೆಂಡಿನ ಸರಳ ಸಹಜ ಸೌಂದರ್ಯವನ್ನು ಬಣ್ಣಿಸಿ ಬರೆದ ಸುನೀತ 'ಹ್ಯಾಪಿ ಇಂಗ್ಲೆಂಡ್'ನಲ್ಲಿ ಕೀಟ್ಸ್ ತಾನು ತಾಯ್ನಾಡಿನಲ್ಲಿ ಖುಷಿಯಾಗಿದ್ದರೂ ಇಟಲಿಯ ಆಳವಾದ, ನಿಗೂಢವಾದ ಆಗಸದತ್ತ ಅವ್ಯಕ್ತ ಸೆಳೆತವಿರುವುದನ್ನು ಒಪ್ಪಿಕೊಂಡಿದ್ದ. ಮನುಷ್ಯನ ಮೂಲ ಸ್ವಭಾವವೇ ಹೊಸತನದ ಅನ್ವೇಷಣೆಯೆಂದು ಸಾರಿದ್ದ. ಇಟಲಿಗೆ ಬರುವ ಮುನ್ನ ಕವಿಯ ಕಾವ್ಯಾತ್ಮಕ ಅಭಿವ್ಯಕ್ತಿ ಚರಮಸೀಮೆಯನ್ನು ತಲುಪಿತ್ತು.



ಕೀಟ್ಸ್ ಶೆಲ್ಲಿ ಮ್ಯೂಸಿಯಂ